ಶ್ರೀ ಬಿ. ಸೋಮಶೇಖರ್.—ವಿಶ್ವಬ್ಯಾಂಕಿನಿಂದ ನೆರವು ಪಡೆದು, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ ಮೂಲಕ ಪ್ರತಿಯೊಂದು ಜಿಲ್ಲೆಗಳಲ್ಲೂ ಹಣ್ಣು ಸಂಸ್ಕರಣ ಘಟಕಗಳನ್ನು ಸ್ಥಾಪನೆ ಮಾಡುವ ಯೋಜನೆ ಸರ್ಕಾರಕ್ಕೆ ಇದೆ.

ಸಂಚಾರಿ ಪಶುವೈದ್ಯ ಘಟಕವನ್ನು ಸ್ಥಾಪಿಸುವ ಬಗ್ಗೆ

೧೧೮೧. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಪಶುಸಂಗೋಪನೆ ಮಂತ್ರಿ ಪಶು ವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸನಗರ ತಾಲ್ಲೂಕಿನಲ್ಲಿ ಸಂಚಾರಿ ಪಶುವೈದ್ಯ ಘಟಕವನ್ನು ಒದಗಿಸದಿರಲು ಕಾರಣಗಳೇನು?

ಆ) ಸದರಿ ಸಂಚಾರಿ ಘಟಕವನ್ನು ಯಾವಾಗ ಒದಗಿಸಲಾಗುವುದು?

ಶ್ರೀ ಸಿದ್ದರಾಮಯ್ಯ (ಪಶುಸಂಗೋಪನೆ ಮಂತ್ರಿ ಪಶುವೈದ್ಯ ಸೇವಾ ರಾಜ್ಯ ಸಚಿವರು).—

ಅ) ಹೊಸನಗರ ತಾಲ್ಲೂಕಿನಲ್ಲಿ ಸಂಚಾರಿ ಪಶುವೈದ್ಯಶಾಲೆಯನ್ನು ತೆರೆಯುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆ, ಆದರೆ ಹಣವ ತೊಂದರೆಯಿಂದಾಗಿ ಒದಗಿಸಲು ಸಾಧ್ಯವಾಗಿಲ್ಲ.

ಆ) ಮುಂಬರುವ ವರ್ಷಗಳಲ್ಲಿ ಪರಿಗಣಿಸಲಾಗುವುದು.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೆ, ಕಳೆದ ವರ್ಷ ಕೂಡ ಇದೇ ತರಹ ಉತ್ತರವನ್ನು ಕೊಟ್ಟಿದ್ದರು. ಮುಂದಿನ ವರ್ಷವೂ ಕೂಡ ಇದೇ ರೀತಿಯ ಉತ್ತರ ಬರಬಹುದೆಂದು ನಿರೀಕ್ಷೆ ಮಾಡುತ್ತೇನೆ. ಯಾವ ತಾರೀಖಿನಲ್ಲಿ ಮಾಡಲಿತ್ತೀರಾ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಿದರೆ ಒಳ್ಳೆಯದಾಗುತ್ತದೆ.

ಶ್ರೀ ಸಿದ್ಧರಾಮಯ್ಯ.—ಸ್ವಾಮಿ, ಕಳೆದ ವರ್ಷ ಈ ರೀತಿಯ ಉತ್ತರ ಕೊಟ್ಟಿರಲಿಲ್ಲ. ಯಾವ ತಾರೀಖು ಎಂದು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಮೂಲಕ ಸಂಚಾರಿ ಪಶುವೈದ್ಯ ಶಾಲೆಗಳನ್ನು ತೆರೆಯುವ ಉದ್ದೇಶ ಸರ್ಕಾರಕ್ಕೆ ಇದಾವುದರಿಂದ ಹೊಸನಗರ ತಾಲ್ಲೂಕಿಗೆ ಆದ್ಯತೆ ಮೇರೆಗೆ ಕೊಡಲಿಕ್ಕೆ ಪ್ರಯತ್ನ ಮಾಡಲಾಗುವುದು.

ರಾಜ್ಯದಲ್ಲಿ ಗಂತ್ರಿಗೆ ಆಧಾರದ ಮೇರೆಗೆ ನೇಮಿಸಿಕೊಂಡಿರುವ ಉಪಾಧ್ಯಾಯರುಗಳ ಸೇವೆಗಳನ್ನು ಖಾಯಂ ಗೊಳಿಸುವುದು

೧೫೨೩. ಶ್ರೀ ಬಿ.ಎ ಉಟ್ಟಿನ (ಕುಂದಗೋಳ),—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಅವರನ್ನು ಖಾಯಂಗೊಳಿಸಲು ಸರ್ಕಾರದವರಂ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ಪ್ರಾಥಮಿಕ ಶಾಲಾ ಶಿಕ್ಷಕರುಗಳು ೩೭೨೬
ಪ್ರೌಢಶಾಲಾ ಶಿಕ್ಷಕರುಗಳು ೩೩೮೦

ಆ) ಇವರುಗಳ ಸೇವೆಯನ್ನು ಖಾಯಂ ಗೊಳಿಸಲು ನಿಯಮಗಳ ರೀತ್ಯಾ ಅವಕಾಶವಿರುವುದಿಲ್ಲ.

ಶ್ರೀ ಬಿ. ಎ. ಉಟ್ಟಿನ.—ಮಾನ್ಯ ಅಧ್ಯಕ್ಷರೇ, ಹೊಸದಾಗಿ ಶಿಕ್ಷಕರನ್ನು ನೇಮಿಸಿಕೊಳ್ಳುತಕ್ಕಂಥ ಸಂದರ್ಭದಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಪ್ರಾಶಸ್ತ್ಯ ಕೊಡಲಾಗುವುದೆ? ಯಾವ ರೀತಿಯ ಪ್ರಾಶಸ್ತ್ಯ ಕೊಡಲಾಗುವುದು?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಮಾನ್ಯ ಅಧ್ಯಕ್ಷರೇ, ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುವಂಥ ಶಿಕ್ಷಕರನ್ನು ಯಾವ ಸಂದರ್ಭದಲ್ಲಿಯಾದರೂ ತೆಗೆಯುವುದಕ್ಕೆ ಅವಕಾಶ ಉಂಟು. ಜಿಲ್ಲಾ ನೇಮಕಾತಿ ಸಮಿತಿಗಳ ಮೂಲಕ ಶಿಕ್ಷಕರ ನೇಮಕವಾಗುತ್ತದೆ, ಕಾನೂನು ಪ್ರಕಾರ ರೋಸ್ಟರ್ ಸಿಸ್ಟಂ ಪಾಲಿಸಬೇಕಾಗಿರುತ್ತದೆ. ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ರಿಸರ್ವೇಷನ್ ಇಡುವುದಕ್ಕೆ ಕಾನೂನಲ್ಲಿ ಅವಕಾಶ ಇಲ್ಲ.

ಶ್ರೀ ಬಿ. ಎ. ಉಪ್ಪಿನ.—ಅನೇಕ ವರ್ಷಗಳಿಂದ ಗುತ್ತಿಗೆ ಆಧಾರದಮೇಲೆ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಅದ್ಯತೆ ಕೊಡದಿದ್ದರೆ ಬಹಳ ಅನ್ಯಾಯವಾಗುತ್ತದೆ, ದಯವಿಟ್ಟು ಇದರ ಬಗ್ಗೆ ವಿಚಾರ ಮಾಡಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಇದರ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಸರ್ವೋಚ್ಚ ನ್ಯಾಯಲಯದ ತೀರ್ಪಿನ ಪ್ರಕಾರ ಕಂಟ್ರಾಕ್ಟ್ ಎಂಪ್ಲಾಯಮೆಂಟ್‌ನಲ್ಲಿ ಕೆಲಸ ಮಾಡಿಂವವರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ. ಈ ಒಂದು ಹಿನ್ನೆಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಎಲ್ಲ ಶಿಕ್ಷಕರನ್ನು ಖಾಯಂ ಮಾಡುತ್ತೀರಾ?

ಶ್ರೀ ಹೆಚ್. ಜಿ. ಗೋವಿಂದೇಗೌಡ.—ನಮಗೆ ತಿಳಿದಂತೆ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಸರ್ವೋಚ್ಚ ನ್ಯಾಯಾಲಯ ತೀರ್ಪು ಕೊಟ್ಟಿದೆ. ಎಲ್ಲಾ ಇಲಾಖೆಗೂ ಅನ್ವಯಿಸುವ ವಿಚಾರ ಗೊತ್ತಿಲ್ಲ, ಹಾಗೆ ಇದ್ದರೆ ಅದರ ಬಗ್ಗೆ ಪರಿಶೀಲನೆ ಮಾಡಲಾಗುವುದು.

ಅಧ್ಯಕ್ಷರು.—ಶ್ರೀ ತಿಪ್ಪೇಸ್ವಾಮಿ ಗೈರು ಹಾಜರಿ.

ಶ್ರೀ ಶೇಖರಪ್ಪಗೌಡ ಶಿರವಾಳ, ಗೈರು ಹಾಜರಿ.

ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ಕೇತಮಾರನಹಳ್ಳಿಯಲ್ಲಿರುವ ಮಾದರಿ ಪ್ರಾಥಮಿಕ ಶಾಲೆಗಳು

೧೬೧೮. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜಾಜಿನಗರ ವಿಧಾನ ಸಭಾ ಕ್ಷೇತ್ರದಲ್ಲಿರುವ ಕೇತಮಾರನಹಳ್ಳಿ ಮಾದರಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭ ಮಾಡಿ ಎಷ್ಟು ವರ್ಷಗಳಾದವು?

ಆ) ಅಲ್ಲಿ ಪ್ರಾಥಮಿಕ ಶಾಲೆಯಲ್ಲದೆ ಪ್ರೌಢಶಾಲೆ ನಡೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಈ) ಈ ಶಾಲೆಯಲ್ಲಿ ಪಾಠ ನಡೆಸಲು ಕೊಠಡಿಗಳಿವೆ? ಹಾಗೂ ವಿದ್ಯಾರ್ಥಿಗಳಿಗೆ ಶೌಚ ಗೃಹವಿದೆಯೇ?

ಉ) ಈ ಸರ್ಕಾರಿ ಶಾಲೆಯಲ್ಲಿ ಕ್ರಮವಾಗಿ ವಿದ್ಯಾಭ್ಯಾಸ ಮಾಡಲು ಎಷ್ಟು ಕೊಠಡಿಗಳು ಬೇಕಾಗುತ್ತದೆ. ಸರ್ಕಾರದವರು ಇದನ್ನು ಕಟ್ಟಿಸಿಕೊಡಲು ಏನು ಕಾರ್ಯಕ್ರಮ ಕೈಗೊಳ್ಳುತ್ತಾರೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ವಯಸ್ಕರ ಹಾಗೂ ಪ್ರಾಥಮಿಕ ಶಿಕ್ಷಣ ಸಚಿವರು).—

ಅ) ೧೯೫೨ರಲ್ಲಿ ಪ್ರಾರಂಭವಾಗಿದ್ದು, ೩೪ ವರ್ಷಗಳು ತುಂಬಿದೆ.

ಆ) ಬಂದಿದೆ.

ಇ) ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳ ಸಂಖ್ಯೆ ೪೭೯.
ಪ್ರೌಢಶಾಲೆ ವಿದ್ಯಾರ್ಥಿಗಳ ಸಂಖ್ಯೆ ೨೦೪.

ಈ) ಕೊಠಡಿಗಳು ೧೦. ಶೌಚ ಗೃಹ ಇಲ್ಲ.